3. ಮತ್ತು ಸದರೀ ರೆಗ್ಯುಷಲೇಷನಿನ 15ನೆ ಸೆಕ್ಷನ್ನಿಂದ ತಮಗೆ ಇರುವ ಅಧಿಕಾರವನ್ನು ಅನುಸರಿಸಿ ಮೈಸೂರ ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು, ಸದರೀ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಸೆಕ್ಷನ್‌ಗಳಂತೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರರು ಮಾಡಿದ ಹುಕುಂಗಳ ಮೇಲಣ ಅಪೀಲ್ಗಳನ್ನು ಹಿಡಿಯುತಕ್ಕ ರೆವಿನ್ಯೂ ಇಲಾಖೆಯ ಆಫಿಸರಾಗಿರಬೇಕೆಂದು ತತ್ಕಾಲದ ಶಿವಮೊಗ್ಗ ಡಿಸ್ಟ್ರಿಕ್ಟಿನ ಡೆಪ್ಯೂಟಿ ಕಮಿಷನರನ್ನು ಮೊಕದರ್ರ್ಮಾಡಿರುತ್ತಾರೆ.

ಹುಕುಂ ಬಮೋಜೀಬ್,
ಜೆ. ಇ. ರಿಕೆಟ್ಸ್,
ಫಾರ್ ಫಾರೆಸ್ಟ್ಸ್ ಇಲಾಖೆಯ ಗವರ್ನ್‌ಮೆಂಟ್ ಅಫೀಷಿಯೇಟಿಂಗ್ ಸೆಕ್ರಟೆರಿ.

ಮುಜರೈ.

ಇನ್ಸ್ಟ್ರಾಮೆಂ.

ತಾರೀಖು 17ನೆ ನವೆಂಬರ್ 1903.

ನಂ. 1235—ಮುಜರೈ. ಫೈ. 30—02, ಭವಾನಹಳ್ಳಿ ಗ್ರಾಮದ ಜೋಡಿದಾರ್ರಾದ ಮ|| ರಾ|| ರಾ|| ರಾಮಚಂದ್ರಸಿಂಗ್ ಯವರು ಮೂಲೂರಲ್ಲಿರುವ ಶ್ರೀ ಶಂಕರ ನಾರಾಯಣಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳಾಗಿ ಮೊಕರರ್ರ್ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿ ರಾವ್,
ಮುಜರೈ ಇಲಾಖೆಯ ಡೆಪ್ಯೂಟಿ ಸೆಕ್ರಟೆರಿ.